## ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಪಿರಿಯಾಪಟ್ಟಣ

**ಸಿ.ಸಿ. ಸಂಃ 221/2023**

| | | | |
|---|---|---|---|
| **ಹೆಸರು:** | ನಿಶಾಂತ್ ಬಿ.ಆರ್ | **ಡಿಡಬ್ಲೂಃ** | 1 |
| **ತಂದೆ/ಗಂಡನ ಹೆಸರು:** | ರವಿ ಜೆ.ಸಿ. | | |
| **ವಯಸ್ಸು:** | 30 ವರ್ಷ | | |
| **ಉದ್ಯೋಗ :** | ವಿಮಾ ಕಂಪನಿ ಏಜೆಂಟ್ | | |
| **ವಾಸಸ್ಥಳ:** | ಮೈಸೂರು | | |

**ದಿಃ *20*.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದೆ.**

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ**

ಈ ಕೇಸಿನ ಪಿರ್ಯಾದಿ ನನಗೆ ಪರಿಚಯ ಇಲ್ಲ. ನಿಪಿ. 1 ರಲ್ಲಿ ಗುರುತಿಸಿರುವ ಚೆಕ್ ಅನ್ನು ನಾನು ಪಿರ್ಯಾದಿಗೆ ಕೊಟ್ಟಿಲ್ಲ. ಬೈಲುಕುಪ್ಪೆಯ ಸುನೀಲ್ ಕುಮಾರ್ ಎನ್ನುವವರು ಬೈಲುಕುಪ್ಪೆಯಲ್ಲಿ ಹೊಂಡಾ ಆಕ್ಟೀವಾ ಶೋ ರೂಮ್ ಇಟ್ಟಿದ್ದಾರೆ. ಆದ್ದರಿಂದ ನಮ್ಮ ತಂದೆ ರವಿಯವರಿಗೆ ಒಂದು ಹೊಂಡಾ ಆಕ್ಟೀವಾ ವಾಹನ ಕೊಡಿಸಲು ಸದರಿ ಶೋ ರೂಮ್ ನಿಂದ ಒಂದು ವಾಹನವನ್ನು ಬುಕ್ ಮಾಡಿದ್ದೆ. ಆದರೂ ಸಹ ವಾಹನ ಕೊಟ್ಟಿರಲಿಲ್ಲ. 2022 ರಲ್ಲಿ ಯಾವುದೋ ಒಂದು ಹೊಂಡಾ ಆಕ್ಟೀವವನ್ನು ನನಗೆ ಕೊಟ್ಟಿದ್ದರು. ಅದನ್ನು ನಾನು ತೆಗೆದುಕೊಂಡು ಹೋಗಿ ನನ್ನ ಸ್ನೇಹಿತ ಹರೀಶ್ ಗೆ ಕೊಟ್ಟಿದ್ದೆ. ಸ್ವಲ್ಪ ದಿವಸ ಆದ ನಂತರ ಆ ವಾಹನ ಕಳ್ಳತನ ಆಗಿತ್ತು. ಆದ್ದರಿಂದ ಹರೀಶ್ ವಿ.ವಿ. ಪುರಂ ಪೋಲೀಸ್ ಠಾಣೆಗೆ ಒಂದು ದೂರು ಕೊಟ್ಟಿದ್ದರು ಆದರೆ ಕಳ್ಳತನವಾಗಿದ್ದ ವಾಹನ ಇನ್ನೂ ನೊಂದಣಿ ಆಗಿಲ್ಲದ ಕಾರಣ ದೂರು ಸ್ವೀಕರಿಸಿರುವುದಿಲ್ಲವೆಂದು ಪೋಲೀಸರು ಹೇಳಿದ್ದರು. ಒಂದು ವೇಳೆ ಕಳ್ಳತನವಾಗಿದ್ದ ಗಾಡಿ ಸಿಕ್ಕಿದ್ದರೆ ನನ್ನ ಮತ್ತು ಸುನೀಲ್ ರವರ ಮೇಲೆ ಯಾವುದೇ ಆಪಾದರೆ ಬರಬಾರದು ಎಂದು ಪೋಲೀಸ್ ಠಾಣೆಯಲ್ಲಿ ಒಂದು ಕರಾರು ಪತ್ರ ಆಯಿತು. ವಾಹನದ ಮೇಲೆ ಸಾಲ ಇದ್ದುದರಿಂದ ಸಾಲವನ್ನು ತೀರಿಸುವಂತೆ ಸುನೀಲ್

ರವರಿಗೆ ಹೇಳಿದ್ದೆ. ಶೋ ರೂಮ್ ನಿಂದ ನನಗೆ ಕೊಟ್ಟಿದ್ದ ವಾಹನ ನೊಂದಣಿ ಆಗಿಲ್ಲದಿದ್ದರೂ ಸಹ ಆ ವಾಹನ ಸನೀಲ್ ಕುಮಾರ್ ಎನ್ನುವವರಿಗೆ ಶೋ ರೂಮ್ ನಿಂದ ಮಾರಾಟ ಆಗಿತ್ತು. ಸದರಿ ಸನೀಲ್ ಕುಮಾರ್ ಈ ಕೇಸಿನ ಪಿರ್ಯಾದಿದಾರರ ತಮ್ಮ. ಪೋಲೀಸ್ ಠಾಣೆಯಲ್ಲಿ ಸನೀಲ್ ಕುಮಾರ್ ವಾಹನದ ಮೇಲಿನ ಸಾಲವನ್ನು ತೀರಿಸಲು ಭದ್ರತೆಗೆ ಚೆಕ್ ಕೊಡುವಂತೆ ಕೇಳಿದರು. ಆದ್ದರಿಂದ ಭದ್ರತೆಗಾಗಿ ಸುನೀಲ್ ಕುಮಾರ್ ರವರಿಗೆ ಕೊಟ್ಟಿದ್ದೆ. ಲೋನ್ ಕ್ಲಿಯರ್ ಮಾಡಿಕೊಳ್ಳುವಂತೆ ಸನೀಲ್ ಕುಮಾರ್ ಗೆ ಹೇಳಿದ್ದೆ. ಆದರೆ ಅವರು ಲೋನ್ ತೀರಿಸಲಿಲ್ಲ. ಆದ್ದರಿಂದ ನಾನು ಸುನೀಲ್ ಗೆ ಕೊಟ್ಟಿದ್ದೆ ಅವರಿಗೆ ಕೊಟ್ಟಿದ್ದ ಚೆಕ್ ಅನ್ನು ಪಿರ್ಯಾದಿ ಮೂಲಕ ನನ್ನ ವಿರುದ್ಧ ಹಾಕಿದ್ದಾರೆ.

**(ಈ ಹಂತದಲ್ಲಿ ಪಾಟೀ ಸವಾಲಿಗೆ ಸಮಯ ಕೋರಿದ್ದು ವಿಚಾರಣೆ ಮುಂದುಡಲಾಯಿತು.)**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)*

**ಓ.ಹೆ.ಕೆ.ಸರಿ ಇದೆ.**

ಸಹಿ/-

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**